25. ಮಣ್ಣೆಮಂಡಲ ಮಣ್ಣೆ ಚಿಕ್ಕಕೆರೆ
26. ,, ಓಬಳಾಪುರ ಚಿಕ್ಕಕೆರೆ
27. ,, ಗೋರಗಟ್ಟದ ಕೆರೆ
28. ಎಲೇಕ್ಯಾತನಹಳ್ಳಿ ಮಂಡಲ ನರಸೀಪುರ ಕೆರೆ
29. ,, ದಾಸೇನಹಳ್ಳಿ ಕೆರೆ
30. ,, ಹೆಗ್ಗುಂದ ದೊಡ್ಡಕೆರೆ
31. ,, ಹೆಗ್ಗುಂದ ಚಿಕ್ಕಕೆರೆ
32. ,, ಬುಗಡಿಹಳ್ಳಿ ಕೆರೆ
33. ಸೋಂಪುರ ಮಂಡಲ ಸೋಂಪುರ ಕೆರೆ
34. ,, ಲಕ್ಕೂರು ಕೆರೆ
35. ಸೋಂಪುರ ಮಂಡಲ ತಟ್ಟೆಕೆರೆ ಕೆರೆ
36. ಶಿವಗಂಗೆ ಮಂಡಲ ಕೆಂಗಲ್‌ಕೆರೆ
37. ,, ವೀರಸಾಗರ ಕೆರೆ
38. ದೊಡ್ಡಬೆಲೆ ಮಂಡುವಾದಕುಂಟೆ ಕೆರೆ

ನಿ ಇ 51 ಸನೀವಿ 93

ವಿಷಯ : ನೆಲಮಂಗಲ ಕ್ಷೇತ್ರದಲ್ಲಿ ವಿದ್ಯುತ್ ಸಲಕರಣೆಗಳ ಅಭಾವ ಮತ್ತು ಕಡಿಮೆ ವೋಲ್ಟೇಜ್‌ನಿಂದಾಗುತ್ತಿರುವ ಅನಾನುಕೂಲ.

Q : 521

ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿನ ಅನೇಕ ಭಾಗಗಳಲ್ಲಿ ವಿದ್ಯುಚ್ಛಕ್ತಿ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟಿರುವುದು ಹಾಗೂ ವೋಲ್ಟೇಜ್ ಕಡಿಮೆ ಇರುವುದು ನಿಜವೇ?

ಆ) ಈ ಮತ ಕ್ಷೇತ್ರಕ್ಕೆ ಅಗತ್ಯವಾಗಿ ಬೇಕಾಗಿರುವ ವಿದ್ಯುತ್ ಸಲಕರಣೆಗಳ ಅಭಾವ ಕೂಡ ಇರುವುದು ನಿಜವೇ?

ಇ) ಈ ಕಾರಣದಿಂದಾಗಿ ಅಲ್ಲಿನ ಜನರಿಗೆ ವಿದ್ಯುತ್ ಅನಾನುಕೂಲವಾಗುತ್ತಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ನೆಲಮಂಗಲ ಕ್ಷೇತ್ರದಲ್ಲಿ ಕೆಲವು ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟಿರುವುದು ಮತ್ತು ಕೆಲವು ಭಾಗಗಳಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿರುವುದು ನಿಜ.

ಆ) ಸ್ವಲ್ಪ ಮಟ್ಟಿಗೆ ಅಭಾವ ಇರುವುದು ನಿಜ.

ಇ) ಸ್ವಲ್ಪ ಮಟ್ಟಿಗೆ ಅನಾನುಕೂಲವಾಗುತ್ತಿರುವುದು ನಿಜ.

ಈ) ಹಾಳಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ತ್ವರಿತಗತಿಯಲ್ಲಿ ಬದಲಿಸಲು ಕ್ರಮ ಕೈಗೊಂಡಿದೆ.

ಡಾಬಸ್ ಪೇಟೆಯಲ್ಲಿ ಒಂದು 66 : 11 ಕೆ.ವಿ. 106.3 ಎಂವಿಎ ವಿದ್ಯುತ್ ಸಬ್‌ಸ್ಟೇಷನ್ ಅನ್ನು ಶೀಘ್ರಗತಿಯಲ್ಲಿ ಸ್ಥಾಪಿಸಲಾಗುವುದು.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಸರಬರಾಜಾಗುತ್ತಿರುವ ವಿದ್ಯುತ್‌ನ ವೋಲ್ಟೇಜ್ ಮಟ್ಟವನ್ನು ಉತ್ತಮಪಡಿಸುವಂತೆ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯನ್ನು ತೀವ್ರವಾಗಿ ಒತ್ತಾಯಿಸಲಾಗುತ್ತಿದೆ.

ನೆಲಮಂಗಲದಲ್ಲಿ ವಿಶ್ವಬ್ಯಾಂಕ್ ನೆರವಿನೊಡನೆ 400 : 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ.

ವಿಷಯ : ಕೆ. ಇ. ಬಿ. ಗೆ ಬರಬೇಕಾದ ಬಾಕಿ ವಸೂಲಿ.

Q : 670

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೈಗಾರಿಕೋದ್ಯಮಿಗಳಿಂದ ಬರಬೇಕಾಗಿರುವ ಬಾಕಿ ಹಣ ಎಷ್ಟು? (ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿರುವ ಬಾಕಿದಾರರ ಪಟ್ಟಿ ಒದಗಿಸುವುದು)

ಆ) ಈ ಬಾಕಿ ವಸೂಲಿ ಮಾಡದೇ ಇರಲು ಕಾರಣವೇನು? ಮತ್ತು ಯಾವಾಗ ಈ ಮೊತ್ತವನ್ನು ವಸೂಲಿ ಮಾಡಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಸೆಪ್ಟೆಂಬರ್ 92ರ ಅಂತ್ಯಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೈಗಾರಿಕೋದ್ಯಮಿಗಳಿಂದ ಬರಬೇಕಾಗಿದ್ದ ಬಾಕಿ ಹಣದ ಮೊತ್ತ 266.24 ಕೋಟಿ ರೂಪಾಯಿಗಳು.

ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿರುವ ಬಾಕಿದಾರರ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಬಾಕಿ ವಸೂಲಿ ಮಾಡದೇ ಇರಲು ಮುಖ್ಯ ಕಾರಣಗಳು :

1. ಕೆಲವು ಕೈಗಾರಿಕೆಗಳು ಬಾಕಿ ಹಣದ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿ ಮಂಡಳಿಯ ವಿರುದ್ಧ ದಾವೆ ಹೂಡಿರುತ್ತಾರೆ. ನ್ಯಾಯಾಲಯಗಳಲ್ಲಿ ಪ್ರಕರಣಗಳು ಇತ್ಯರ್ಥವಾಗದ ಹೊರತು ವಸೂಲಾತಿಯ ಬಗ್ಗೆ ಯಾವ ತೀವ್ರ ಕ್ರಮವನ್ನು